# ಬಹುತ್ವ ಸಂಕಥನ

## ಭಾಷೆ-ಸಾಹಿತ್ಯ-ಸಂಸ್ಕೃತಿ ನಿರ್ವಚನ

ಸಂಪಾದಕರು

**ಡಾ. ಶುಭಾ ಮರವಂತೆ**

ಸಹ ಸಂಪಾದಕರು

ಶ್ರೀ ದೊಡ್ಡನಾಯ್ಕ್ ಎಚ್

ಶ್ರೀ ಕುಮಾರಸ್ವಾಮಿ

ಓಂಕಾರ್ ನಾಯ್ಕ್ ಜಿ.

ಕುವೆಂಪು ವಿಶ್ವವಿದ್ಯಾಲಯ ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು, ಶಿವಮೊಗ್ಗದ
ಕನ್ನಡ ವಿಭಾಗವು ಆಯೋಜಿಸಿದ ರಾಷ್ಟ್ರಮಟ್ಟದ ಬಹುಶಿಸ್ತೀಯ ವಿಚಾರ ಸಂಕಿರಣದಲ್ಲಿ
ಮಂಡಿತವಾದ ಪ್ರಬಂಧಗಳ ಸಂಕಲನ

Scanned with CamSca

**BAHUTVA SANKATHANA**

**BHASHE-SAHITYA-SAMSKRUTI NIRVACHANA**

**(A collection of articles)**


Chief Editor

**Dr..Shubha Maravanthe**

Associate Editors

**Sri Dodda Naik H.**

**Sri Kumaraswamy**

**Sri Onakar G. Naik**



Published by

**GEETHANJALI PUSTHAKA PRAKASHANA**

Revenue Building, 100ft Road, Rajendra Nagar,
Shimoga - 577201, Karnataka.
Mobile: 9449886390, 9916197291.
E-mail: gbtmohan@gmail.com

**ISBN: 978-93-86855-17-6**

First Impression: 2019

Pages: 768

Price : Rs. 700

Paper Used: 70 GSM. Maplitho Size: Demy 1/8



© ಆಯಾ ಲೇಖಕರು



ಮೊದಲನೆಯ ಮುದ್ರಣ: ೨೦೧೯

ಪುಟಗಳು: ೭೬೮

ಬೆಲೆ: ರೂ. ೭೦೦

ಮುಖಪುಟ ವಿನ್ಯಾಸ: ಜಿಬಿಟಿ ಗ್ರಾಫಿಕ್ಸ್

**ಪುಸ್ತಕ ದೊರೆಯುವ ಸ್ಥಳ**

**ಜಿ.ಬಿ.ಟಿ ಪಬ್ಲಿಕೇಷನ್ಸ್**

ದೊಣ್ಣೇಹಳ್ಳಿ ಅಂಚೆ, ಜಗಳೂರು (ತಾ) ೫೭೭ ೫೨೮
ದಾವಣಗೆರೆ ಜಿಲ್ಲೆ. ಮೊ: ೯೯೧೬೧೯೭೨೯೧

ಪ್ರಕಾಶಕರು

**ಗೀತಾಂಜಲಿ ಪುಸ್ತಕ ಪ್ರಕಾಶನ**

ಕಂದಾಯ ಭವನ, ನೂರಡಿ ರಸ್ತೆ, ರಾಜೇಂದ್ರ ನಗರ
ಶಿವಮೊಗ್ಗ - ೫೭೭ ೨೦೧
ದೂರವಾಣಿ: ೯೪೪೯೮೮೬೩೯೦

ಮುದ್ರಣ : ಲಕ್ಷ್ಮೀ ಮುದ್ರಣಾಲಯ, ಬೆಂಗಳೂರು.



Scanned with CamSca

# ಪರಿವಿಡಿ


| | | |
|---|---|---|
| ಕುಲಪತಿಗಳ ಸಂದೇಶ | | ೩ |
| ಕುಲಸಚಿವರ ಶುಭನುಡಿ | | ೫ |
| ಗೌರವ ಸಂಪಾದಕರ ನುಡಿ | | ೬ |
| ಸಂಪಾದಕರ ಮಾತು | | ೭ |
| ಪ್ರಸ್ತಾವನೆ | | ೧೧ |
| ಪ್ರಕಾಶಕರ ಮಾತು | | ೧೬ |
| • ಅಸ್ತಿತ್ವ ನಿರ್ವಚನ: ಸ್ತ್ರೀ ದೇಹ ಮತ್ತು ಅರಿವಿನ ಸಮಗ್ರತೆ | ಡಾ. ಗೀತಾ ವಸಂತ | ೨೫ |
| • ರಾಷ್ಟ್ರೀಯತೆ ಮತ್ತು ಕೋಮುವಾದ: ವರ್ತಮಾನದ ಬಿಕ್ಕಟ್ಟುಗಳು | ಡಾ. ಅಣ್ಣಪ್ಪ ಎನ್. ಮಳೀಮಠ್ | ೩೦ |
| • ಕನ್ನಡ ನಾಟಕಗಳು : ಓದಿನ ಬಗೆಗಳು | ಲವ ಜಿ. ಆರ್. | ೩೬ |
| • ಅರೆಅಲೆಮಾರಿ ಕೋಲೆಬಸವರು: ಸಾಮಾಜಿಕ ಅಸ್ಮಿತೆ | ಡಾ. ವಿಜಯಲಕ್ಷ್ಮಿ | ೪೩ |
| • ಅಲೆಮಾರಿಗಳಲ್ಲಿ ದಕ್ಕಲ ಜನಾಂಗದ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿ | ಡಾ. ಅರುಣಾ ಕಟ್ಟಿಮನಿ | ೪೭ |
| • ಚಿಕ್ಕಮಗಳೂರು ಜಿಲ್ಲೆಯ ಶ್ರಮಣಧಾರೆ ಪರಂಪರೆ: ಬಹುತ್ವದ ನೆಲೆಗಳು | ಬಸವರಾಜ ಕೆ ಹೆಚ್ | ೫೩ |
| • ಸಮಕಾಲೀನ ಬಿಕ್ಕಟ್ಟುಗಳು ಮತ್ತು ಮಾಧ್ಯಮಗಳ ಜವಾಬ್ದಾರಿ | ಸೌಮ್ಯ ಕೆ. ಸಿ. | ೫೯ |
| • ವೈದೇಹಿ 'ಅಕ್ಕು' ಕತೆಯಲ್ಲಿ ಮಹಿಳಾ ಸಂವೇದನೆ ಮತ್ತು ಅಭಿವ್ಯಕ್ತಿ ಕ್ರಮಗಳು | ಪ್ರೊ. ಜಗದೇವಿ ಎಂ ಕಲಶೆಟ್ಟಿ | ೬೪ |
| • ಕನ್ನಡ ಸಾಹಿತ್ಯ ಮತ್ತು ಜನಪರ ಆಲೋಚನ ಕ್ರಮಗಳು "ದಲಿತ-ಬಂಡಾಯ ಸಾಹಿತ್ಯ" | ಲೋಹಿತ್ ಪಿ | ೬೯ |
| • ವಚನ ಚಳುವಳಿ: ಮಹಿಳೆ ಮತ್ತು ಮೌಲ್ಯ ಸಂಘರ್ಷ | ಡಾ. ಸಿ.ಟಿ. ಜಯಣ್ಣ | ೭೬ |
| • ಕರ್ನಾಟಕ-ನಾಡು-ನುಡಿ | ಶೋಭಾ ನಾಯಕ | ೮೨ |

# ವಚನ ಚಳುವಳಿ: ಮಹಿಳೆ ಮತ್ತು ಮೌಲ್ಯ ಸಂಘರ್ಷ

ಡಾ. ಸಿ.ಟಿ. ಜಯಣ್ಣ
ಸಹಾಯಕ ಪ್ರಾಧ್ಯಾಪಕರು, ಎಸ್.ಜೆ.ಎಂ. ಮಹಿಳಾ ಕಾಲೇಜು, ಚಿತ್ರದುರ್ಗ

ಮಹಿಳೆಯನ್ನು ಕುರಿತ ಆಲೋಚನೆ ಬುದ್ಧನ ಕಾಲದಲ್ಲಿ ತುಂಬ ವ್ಯಾಪಕವಾದ ನೆಲೆಯಲ್ಲಿ ನಡೆದು ಅದು ಕೇವಲ ಆಲೋಚನೆಯ ಘಟ್ಟಕ್ಕೆ ಮಾತ್ರ ಸೀಮಿತವಾಗದ ಕ್ರಿಯಾತ್ಮಕವಾಗಿ ಅನುಷ್ಠಾನಗೊಂಡದ್ದನ್ನು 'ಬುದ್ಧ ಸಂಘ'ದಲ್ಲಿನ ಮಹಿಳೆಯ ನಿರ್ಣಾಯಕ ಪಾತ್ರವನ್ನು ಕುರಿತ ಚರಿತ್ರೆಯಲ್ಲಿ ಕಾಣಬಹುದಾಗಿದೆ. ಅಲ್ಲದೆ, ಬೌದ್ಧ ಚಿಂತನೆಯಲ್ಲಿ ಅದು ಸ್ತ್ರೀಪರ ಚಿಂತನೆ ಎಂಬ ಒಂದು ಪ್ರತ್ಯೇಕ ಘಟಕವಾಗಿ ಮಾರ್ಪಡದೆ, ಅಥವಾ ಸ್ತ್ರೀ ಪರವಾಗಿ ಕೇವಲ ಸಹಾನುಭೂತಿ ಪರವಾದ ಘಟ್ಟಕ್ಕೆ ಮಾತ್ರ ಆ ಆಲೋಚನೆ ಸೀಮಿತವಾಗಿರದೆ, ಸ್ತ್ರೀ-ಪುರುಷರಿಬ್ಬರೂ ಆ ಕುರಿತು ಚಳುವಳಿ ಮೂಲದ ಇಡೀ ವ್ಯವಸ್ಥೆಯ ಹಿನ್ನೆಲೆಯಲ್ಲಿ ಪುರುಷರಿಗೆ ಸಮಾನಳಾಗಿ ಇಡೀ ಮಾನವ ಜನಾಂಗದ ಮಹೋನ್ನತಿಯ ಮಹದಾಕಾಂಕ್ಷೆಯ ಬಗೆಗೆ, ಸ್ತ್ರೀಯು ನಿರ್ವಹಿಸಿದ ತೀರಾ ಸಮಕಾಲೀನವಾದ ಸಕ್ರಿಯ ಪಾತ್ರದ ಬಗ್ಗೆ ಪ್ರಜಾಪ್ರಭುತ್ವದ ಸೈದ್ಧಾಂತಿಕ ಹಿನ್ನೆಲೆಯಲ್ಲಿ ಚಿಂತಿಸಿರುವುದನ್ನು ಕಾಣಬಹುದು.

ಇದೇ ಹಿನ್ನೆಲೆಯುಳ್ಳ ಮತ್ತೊಂದು ಘಟ್ಟವೆಂದರೆ, ಹನ್ನೆರಡನೇ ಶತಮಾನದ ವಚನ ಸಾಹಿತ್ಯಕ್ಕೆ ಭೂಮಿಕೆಯಾದ 'ಅನುಭವ ಮಂಟಪ'. ನೂರಾರು ಬುದ್ಧಿಜೀವಿ ಪುರುಷರೊಡನೆ ನೂರಾರು ಸಂಖ್ಯೆಯ ಬುದ್ಧಿಜೀವಿ ಮಹಿಳೆಯರು ಸೇರಿ ಅನುಭವ ಮಂಟಪದಲ್ಲಿ ಕುಳಿತು ತಮ್ಮ ಲೋಕೋತ್ತರ ಚಿಂತನೆಯಿಂದ ಮಹಿಳೆಗೊಂದು ಅಬಾಧಿತವೂ ಅಖಂಡವೂ ಆದ ಪೂರ್ಣ ವ್ಯಕ್ತಿತ್ವವನ್ನೇ ನಿರ್ಮಿಸಿದುದನ್ನು ಕಾಣಬಹುದಾಗಿದೆ.

ಸ್ತ್ರೀಯ ಬಗೆಗೆ ಶರಣ ಸಾಹಿತ್ಯದಲ್ಲಿ ಗುರುತಿಸಲೇಬೇಕಾದಂಥ ಮಹತ್ವದ ಸಂಗತಿ ಎಂದರೆ, ಸ್ತ್ರೀಯನ್ನು 'ಮಾಯೆ'ಯೆಂತಲೂ 'ಶಕ್ತಿ'ಯೆಂತಲೂ ಪರಿಗ್ರಹಿಸುವ, ಸ್ತ್ರೀಯನ್ನು ಕುರಿತ ಶರಣರ ಪರಿಕಲ್ಪನೆಯಲ್ಲಿನ ಈ ಸ್ಥಿತಿಯನ್ನು ಕೆಲವರು ದ್ವಂದ್ವ ಎಂಬುದಾಗಿ ಪರಿಭಾವಿಸಿರುವುದನ್ನು ಮರೆಯುವಂತಿಲ್ಲ. ಹಾಗೆಯೇ, ಸ್ತ್ರೀಯನ್ನು ಕುರಿತಂತೆ ಶರಣರ ಧೋರಣೆಗೂ, ಸ್ತ್ರೀಯನ್ನು ಕುರಿತ ಸ್ವತಃ ಸ್ತ್ರೀಯರ, ಅಂದರೆ ಶರಣೆಯರು ತಮ್ಮನ್ನು ತಾವೇ ಲೋಕದ ಮುಂದೆ ಅಭಿವ್ಯಕ್ತಿಸಿಕೊಂಡು ನಿಂತ ವ್ಯಕ್ತಿತ್ವಕ್ಕೂ ಇರುವ ಅಂತರ ಕೂಡ, ಅಷ್ಟೇ ಸಂಕೀರ್ಣವೂ ಚಿಂತನಾರ್ಹ ಅಂಶವೂ ಆಗಿದೆಯೆಂಬುದನ್ನು ನೆನಪಿಡಬೇಕಾಗುತ್ತದೆ. ಆದಾಗ್ಯೂ, ಇಲ್ಲಿ ನಮೂದಿಸಲೇಬೇಕಾದ ಅತ್ಯಂತ ಮುಖ್ಯವಾದ ಸಂಗತಿ ಎಂದರೆ, ಕಾಳವ್ವೆ



ಲಿಂಗಮ್ಮ, ಅಕ್ಕಮಹಾದೇವಿ ಮತ್ತು ಮುಕ್ತಾಯಕ್ಕರಂಥ ಸ್ತ್ರೀ ಪಾತ್ರಗಳಿಗೆ, ಕಾಳಿದಾಸನ ಶಕುಂತಳೆಯನ್ನಾಗಲಿ, ಪಂಪನ ಶ್ರೀಮತಿಯನ್ನಾಗಲಿ, ಲಕ್ಷ್ಮೀಶನ ಸೀತೆಯನ್ನಾಗಲಿ ಅಥವಾ ನಾಗವರ್ಮನ ಮಹಾಶ್ವೇತೆಯನ್ನಾಗಲಿ ಹೋಲಿಸುವುದು ಸಾಧ್ಯವಿಲ್ಲ.

ಶರಣರು ಸ್ತ್ರೀಯನ್ನು ಕೆಲವೊಮ್ಮೆ 'ಮಾಯೆ' ಎಂತಲೂ ಇನ್ನೂ ಕೆಲವೊಮ್ಮೆ 'ಶಕ್ತಿ' ಎಂತಲೂ ಪರಿಗ್ರಹಿಸಿರುವುದನ್ನು ದ್ವಂದ್ವ ಎಂಬುದಾಗಿ ಭಾವಿಸಿರುವುದು ಬಹುಶಃ ಪೂರ್ಣದೃಷ್ಟಿಯಿಂದ ವ್ಯಕ್ತವಾದ ಅಭಿಪ್ರಾಯವಾಗಿರುವಂತಿಲ್ಲ. ಏಕೆಂದರೆ 'ಶಕ್ತಿ' ಎಂಬುದನ್ನು ಸಕಾರಾತ್ಮಕವಾಗಿಯೂ 'ಮಾಯೆ' ಎಂಬುದನ್ನು ನಕಾರಾತ್ಮಕವಾಗಿಯೂ ತೆಗೆದುಕೊಳ್ಳುವುದು ಬಹುಶಃ ಸಮಂಜಸವೆನಿಸುವಂತಿಲ್ಲ. ಅಲ್ಲದೆ, ಈ ಎರಡು ನುಡಿ ವಿಶೇಷಣಗಳು ಶರಣರ ಸಂದರ್ಭದಲ್ಲೂ, ಸ್ತ್ರೀಯ ಸಂದರ್ಭದಲ್ಲೂ ಪರಸ್ಪರ ಪೂರಕವಾದ ಅರ್ಥವ್ಯುತ್ಪತ್ತಿಯ ನುಡಿಗಳೇ ಹೊರತು, ವಿರುದ್ಧಾರ್ಥವುಳ್ಳ ಪದಗಳಲ್ಲವೆಂಬುದನ್ನು ಮರೆಯುವಂತಿಲ್ಲ. ಈ ಬಗ್ಗೆ ಬಹುಶಃ ಎರಡು ನಿದರ್ಶನಗಳನ್ನು ಉದ್ಧರಿಸಬಹುದಾಗಿದೆ. ಮೊದಲನೆಯದಾಗಿ, ಸ್ವತಃ ಶರಣರೇ ತಮ್ಮ ಅಭಿವ್ಯಕ್ತಿಗಳಲ್ಲಿ ಸ್ತ್ರೀ ಬಗ್ಗೆ ತಳೆದ ನಿಲುವು. ಎರಡನೆಯದಾಗಿ, ಸ್ತ್ರೀ ಮತ್ತು ಪುರುಷರ ನಡುವಿನ ಸಂಬಂಧದ ಪ್ರಾಪಂಚಿಕ ಸತ್ಯವನ್ನು 'ಸತಿ' ಮತ್ತು 'ಪತಿ' ಎಂಬುದಾಗಿ ಅವರು ನಡೆಸಿಕೊಂಡಿರುವಲ್ಲಿ, ಸ್ತ್ರೀಗೆ ದೊರೆತ ವಿಶೇಷ ಗೌರವ ಮತ್ತು ಮನ್ನಣೆಗಳ ಸ್ವರೂಪ. ಆದರೆ, ಸ್ತ್ರೀಗೆ ಹಾಗೆ ದೊರೆತ ಗೌರವ ಅದೆಷ್ಟು ಸ್ವಾಭಾವಿಕವಾದುದು ಮತ್ತು ಸಂಕೀರ್ಣವಾದದ್ದು ಎಂಬುದನ್ನು ಬಹುಶಃ ಪ್ರತ್ಯೇಕವಾಗಿಯೂ ವಿಶೇಷವಾಗಿಯೂ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಶರಣರು ಬಹುಪತ್ನಿತ್ವದ ಬಗ್ಗೆ ಆಲೋಚಿಸಿದ್ದಾರೆ; ಪರಸತಿ ಮತ್ತು ಪರಪತಿ ಎಂಬವುಗಳ ಬಗೆಗೆ ಪರಿಕಲ್ಪನಾತ್ಮಕವಾಗಿಯೂ ಸೈದ್ಧಾಂತಿಕವಾಗಿಯೂ ಚಿಂತಿಸಿದ್ದಾರೆ. ಹಾಗೆಯೇ, ಪತ್ನಿಯನ್ನು 'ಸತಿ' ಮತ್ತು 'ಶಕ್ತಿ' ಅಥವಾ 'ಶಿವೆ' ಎಂಬದಾಗಿಯೂ ಗೌರವಿಸಿರುವುದನ್ನು ಕಾಣಬಹುದಾಗಿದೆ. ಆದರೆ, ಶರಣರ ಸಂದರ್ಭದಲ್ಲಿ, ವ್ಯಾವಹಾರಿಕ ಲೋಕದ ಸರ್ವ ಸಾಧ್ಯತೆಗಳ ಹಿನ್ನೆಲೆಯಲ್ಲಿ, ಅವಳ ವ್ಯಕ್ತಿತ್ವವನ್ನೂ ಅವಳನ್ನೂ ನೋಡಿದ್ದಾರೆ ಎಂಬುದೇ ಗಮನಾರ್ಹವಾದ ಅಂಶ. ಅಂಥ ಅನೇಕ ನಿದರ್ಶನಗಳನ್ನೇ ವಚನ ಸಾಹಿತ್ಯದಲ್ಲಿ ನೋಡಬಹುದಾಗಿದೆ.

ಈ ಹಿಂದೆಯೇ ಸೂಚಿಸಿರುವಂತೆ, ಸತಿಯನ್ನು ಸಾಕ್ಷಾತ್ ಶಿವೆ ಎಂಬುದಾಗಿ ನಡೆಸಿಕೊಂಡರು ಶರಣರು. ಆದರೆ ಅವಳನ್ನು ಅತಿಯಾದ ಆದರ್ಶೀಕರಣಕ್ಕೆ ಒಳಪಡಿಸಿಲ್ಲವೆಂಬ ವಾಸ್ತವಿಕ ಸತ್ಯವನ್ನು ಬಹುಶಃ ಪ್ರಥಮ ದೃಷ್ಟಿಯಲ್ಲೇ ಗಮನಿಸಬೇಕು. ಉದಾ: ಮೋಳಿಗೆ ಮಾರಯ್ಯನ ಒಂದು ವಚನ ಹೀಗಿದೆ:

> "ಸತ್ವ ಕೆಟ್ಟಲ್ಲಿ ಕಾಷ್ಟವನ್ನೂರಿ ನಡೆಯಬೇಕು
> ಮತ್ತತ್ವವಿದ್ದಲ್ಲಿ ನಿಶ್ಚಯವ ಹೇಳಲಾಗಿ
> ಮಹಾಪ್ರಸಾದವೆಂದು ಕೈಕೊಳ್ಳಬೇಕು
> ಎನ್ನ ಭಕ್ತಿಗೆ ನೀ ಶಕ್ತಿಯಾದ ಕಾರಣ



Scanned with CamSca

rnal | Year of publication | ISSN number | Link to website | Link

ವಿಯೋಗ ಆಧ್ಯಾತ್ಮದ ಅತ್ಯಂತ ಎತ್ತರದ ಸ್ತರದಲ್ಲಿರುವ ಮುಕ್ತಾಯಕ್ಕನನ್ನೂ ಬಿಡಲಿಲ್ಲವೆಂಬುದು ಇಲ್ಲಿ ತುಂಬಾ ಧ್ವನಿಪೂರ್ಣವಾದುದು.

ಆಧ್ಯಾತ್ಮ ಶಿಖರದಲ್ಲಿರುವ ಮುಕ್ತಾಯಕ್ಕನು, ಮೂಲತಃ ಒಬ್ಬ ಮಾನವ ವ್ಯಕ್ತಿ ಎಂಬುದನ್ನು ಮರೆಯುವಂತಿಲ್ಲ. ಹೀಗೆ ಸಾವು, ನೋವು, ವಿಯೋಗ ಮುಂತಾದ ಮಾನವ ಸಹಜ ಸತ್ಯಗಳ ಸಾಮಾನ್ಯ ಸ್ತರಗಳಿಂದ ಮೇಲೇರುತ್ತ ಹೋಗುವ ಪ್ರಭುದೇವ ಮತ್ತು ಮುಕ್ತಾಯಕ್ಕರ ಸಂಭಾಷಣೆಗಳು, ಜ್ಞಾನದ ಮಹಿಮೆಯತ್ತ ಗಂಭೀರ ತಿರುವು ಪಡೆದು ಲೋಕದ ಲುಪ್ತ ಭಾವಗಳ ಬಗೆಗೆ ಮಹಾಪರ್ವತವೊಂದು ಮುಗಿಲೊಡನೆ ಮಾತುಕತೆ ನಡೆಸುತ್ತಿದೆಯೋ ಎಂಬಂತೆ, ಜ್ಞಾನದ ಮಹತ್ವವನ್ನು, ಮಾನವನ ಸಮಸ್ಯೆಯ ಸರ್ವ ಮೂಲವನ್ನೂ ಅಮೂಲಗೊಳಿಸುವ ಮತ್ತು ಅದನ್ನು ಪಡೆಯುವ ಧ್ಯಾನ ಮತ್ತು ಚಿಂತನದ ಮೊದಲ ಮಾತನ್ನು ಮುಕ್ತಾಯಕ್ಕನು ಹೀಗೆ ಹೇಳುತ್ತಾಳೆ: "ಗುರು ವಚನದಿಂದಲ್ಲದೆ ಲಿಂಗವನರಿಯಬಾರದು. ಗುರುವಚನದಿಂದಲ್ಲದೆ ಪ್ರಸಾದವನರಿಯಬಾರದು. ಗುರುವಚನದಿಂದಲ್ಲದೆ ತನ್ನ ತಾನರಿಯಬಾರದು. ಹಿಂದಣ ಜನ್ಮದಲ್ಲಿ ಗುರುವ ಪೂಜಿಸಿ, ತನ್ನ ಜ್ಞಾನೋದಯವಾದರೆ, ಗುರುವಿಲ್ಲದ ಮುನ್ನವೆ ಆಯಿತೆನ್ನಬಹುದೆ? ತನ್ನಲ್ಲಿ ತಾನು ಸನ್ನಿಹಿತವಾದೆನೆಂದರೆ, ಗುರುವಿಲ್ಲದೆ ಆಗದು ಕೇಳಾ. ಎನ್ನ ಅಜಗಣ್ಣನೆಂಬ ಗುರುವಿಲ್ಲದೆ ಆ ರೂಢಿಯ ಕೂಟ ಸಮನಿಸದು ಕೇಳಾ" ಹೀಗೆ ಗುರುಮೂಲ ನೆಲೆಯಿಲ್ಲದ ಶಿಷ್ಯ ಅಥವಾ ಜ್ಞಾನ ತನ್ನ ತಾನೇ ಸಂಭವಿಸದೆಂಬ ಮುಕ್ತಾಯಕ್ಕನ ನಿಲುವಿಗೆ ಅಲ್ಲಮಪ್ರಭುವಿನ ಪ್ರತಿನಿಲುವು ಹೀಗಿದೆ: "ಗುರುವಿಂಗೂ ಶಿಷ್ಯಂಗೂ ಆವುದು ದೂರ, ಆವುದು ಸಾಕೆ - ಎಂಬುದನಾರು ಬಲ್ಲರಯ್ಯ! ಗುರುವೇ ಶಿಷ್ಯನಾದ ತನ್ನ ವಿನೋದಕ್ಕೆ. ಆ ಶಿಷ್ಯನೆ ಗುರುವಾದ ತನ್ನ ವಿನೋದಕ್ಕೆ. ಕರ್ಮವೆಂಬ ಕೌಟಿಲ್ಯವೆಡೆವೊಕ್ಕ ಕಾರಣ ಭಿನ್ನವಾಗಿ ಇದ್ದಿತ್ತೆಂದರೆ ಅದು ನಿಶ್ಚಯವಹುದೆ? ಆದಿಯಿಲ್ಲದ ಅನಾದಿಯಿಲ್ಲದ, ತತ್ತ್ವಮಂ ತಿಳಿದು ನೋಡಲು, ನೀನೇ ಸ್ವಯಂಜ್ಯೋತಿ ಪ್ರಕಾಶನೆಂದರಿಯಲು ನಿನಗೆ ನೀನೇ ಗುರುವಲ್ಲದೆ, ನಿನ್ನಿಂದಧಿಕವಪ್ಪ ಗುರು ಉಂಟೆ. ಇದು ಕಾರಣ, ಗೋಗೇಶ್ವರನೆಂಬ ಲಿಂಗವು ತಾನೇ ಎಂಬುದನೂ ತನ್ನಿಂದ ತಾನೇ ಅರಿಯಬೇಕು ನೋಡಾ". ಅಂದರೆ, ಈ ಪ್ರತ್ಯುತ್ತರದಲ್ಲಿ ಅಡಗಿರುವ ಮಹತ್ವದ ಅಂಶವನ್ನು ಗಮನಿಸಬೇಕು. ಜ್ಞಾನದ ವಿಷಯದಲ್ಲಿ ಗುರುಶಿಷ್ಯ ಪರಿಕಲ್ಪನೆಯ ಮಹತ್ವವನ್ನು ಎತ್ತಿ ಹಿಡಿದ ಮುಕ್ತಾಯಕ್ಕನಿಗೆ ಕೊಟ್ಟ ಉತ್ತರದಲ್ಲಿ ಅಲ್ಲಮನು, ಮಾನವನ ಆತ್ಮಜ್ಯೋತಿ ಪ್ರಜ್ವಲಿಸಲು ಧ್ಯಾನ ಅತ್ಯಂತ ಅವಶ್ಯಕವಾದುದು ಎಂಬುದನ್ನು ಅಲ್ಲಮನು "ಜ್ಯೋತಿಪ್ರಕಾಶ" ಎಂಬ ನುಡಿ ವಿಶೇಷಣದಲ್ಲಿ ತುಂಬಾ ಅರ್ಥಪೂರ್ಣವಾಗಿಯೇ ಧ್ವನಿಸಿರುವುದನ್ನು ಕಾಣಬಹುದಾಗಿದೆ. ಮುಕ್ತಾಯಕ್ಕನು ಇಲ್ಲಿ ಪರಿಮಜ್ಞಾನಿಯಾದ ಅಲ್ಲಮನು ನಿಲ್ಲುವ ಅತ್ಯಂತ ಎತ್ತರದ ಜ್ಞಾನದ ಸ್ತರಕ್ಕೆ ಸರಿಸಾಟಿಯಾಗಿ ನಿಲ್ಲುತ್ತಾಳೆ ಎಂಬುದು ನಿರ್ವಿವಾದ.

ಸೋದರನಾದ ಅಜಗಣ್ಣನು ಯೋಗದಲ್ಲಿ ಲಯವಾದ ಬಳಿಕ, ಆ ವಿಯೋಗವು ಆಕೆಯನ್ನು ಒಬ್ಬ ಜ್ಞಾನಿಯಂತೆ ಒಂದೆಡೆ ಸ್ವೀಕರಿಸಿದರೂ, ಮತ್ತೊಂದೆಡೆ ಅದೇ ವಿಯೋಗವು



ವಿಲಾಪವಾಗಿ ಮನುಷ್ಯ ಸಹಜವಾದ ಭಾವ ಸಮುಚ್ಚಯದೆಡೆಗೆ ಅವಳನ್ನು ಸೆಳೆಯುತ್ತದೆ. ಅಂತೆಯೇ, ಅಣ್ಣನಾದ ಅಜಗಣ್ಣನ ವಿಯೋಗವನ್ನು ಜ್ವಲಂತ ಉಪಮೆಗಳ ಮೂಲಕ ಬಿಡಿಸುತ್ತ ಹೋಗುವ ಅವಳ ಅಭಿವ್ಯಕ್ತಿ ಕೌಶಲದಲ್ಲಿ, ಸೂರ್ಯ ಪ್ರಕಾಶದಷ್ಟು ಪ್ರಕಾಶಮಾನವಾಗಿ, ಸ್ವತಃ ಅವಳ ಪ್ರತಿಭೆಯೇ ಅಡಗಿರುವುದನ್ನು ಕಾಣಬಹುದಾಗಿದೆ. "ಅಲರೊಳು ಅಡಗಿದ ಪರಿಮಳದಂತೆ" "ಪತಂಗಗಳೊಡಗಿದ ಅನಲದಂತೆ" "ಆಕೆಯೊಳಡಗಿದ ಶೋಡಪ ಕಳೆಯಂತೆ" "ಉಲುಹು ಅಡಗಿಹ ವಾಯುವಿನಂತೆ" "ಕಬ್ಬಿಣ ಉಂಡ ನೀರಂತೆ" "ಕಬ್ಬಿಸಿಲುಬ ಅರಸಿನದಂತೆ" "ಉರಿಯೊಳಡಗಿದ ಕರ್ಪೂರದಂತೆ" "ಬಯಲನಪ್ಪಿದ ವಾಯುವಿನಂತೆ" ಮುಂತಾಗಿ ತಲೆದೂಗಿ ಧ್ಯಾನಿಸುವ ಅರ್ಥವುಳ್ಳ ಧ್ವನಿರಮ್ಯ ಉಕ್ತಿಗಳಲ್ಲಿ, ಅವಳ ಅಸಾಧಾರಣ ಪ್ರತಿಭಾ ಶಕ್ತಿಯನ್ನೂ, ಅಭಿವ್ಯಕ್ತಿ ಕೌಶಲವನ್ನೂ, ಒಟ್ಟಾರೆ ಒಂದು ಮಹಾನ್ ಸ್ತ್ರೀ ವ್ಯಕ್ತಿತ್ವವನ್ನು ಅವರ ವಚನಗಳಲ್ಲಿ ಕಾಣಬಹುದಾಗಿದೆ.

**ಪರಾಮರ್ಶನ ಗ್ರಂಥಗಳು**


- ಅಲ್ಲಮನ ವಚನಗಳು – ಎಲ್. ಬಸವರಾಜು
- ಅಕ್ಕನ ವಚನಗಳು – ಸಾ.ಶಿ. ಮರುಳಯ್ಯ
- ಪ್ರಭುದೇವರ ಶೂನ್ಯಸಂಪಾದನೆ – ಎಲ್. ಬಸವರಾಜು
- ವಚನ ಸಾಹಿತ್ಯ – ಎಂ. ಚಿದಾನಂದಮೂರ್ತಿ
- ವಚನ ಮಾರ್ಗ – ಎಂ.ಎಂ. ಕಲಬುರ್ಗಿ
- ಸಾಹಿತ್ಯದಲ್ಲಿ ಸ್ತ್ರೀವಾದ – ವೀಣಾ ಶಾಂತೇಶ್ವರ್
- ವಚನ ಸಾಹಿತ್ಯ ಮತ್ತು ಮಹಿಳೆ – ಶೆಲಜಾ ಉಡಚಣ


■■



Scanned with CamScanner